**All India Radio: Bangalore**
**National Bulletin In Kannada**
**03.01.2026 1.10 p.m.**

ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು

**03.01.2026 1.10 p.m.**

**<><><><>**

ಮುಖ್ಯಾಂಶಗಳು

1. ನವದೆಹಲಿಯಲ್ಲಿಂದು ಭಗವಾನ್ ಬುದ್ಧರ ಪವಿತ್ರ ಪಿಪ್ರಹ್ವಾ ಅವಶೇಷಗಳ ಅಂತಾರಾಷ್ಟ್ರೀಯ ಪ್ರದರ್ಶನ ಉದ್ಘಾಟಿಸಿದ ಪ್ರಧಾನಿ ನರೇಂದ್ರ ಮೋದಿ
2. ಬುಲೆಟ್ ರೈಲು ಯೋಜನೆಯಿಂದ ಉದ್ಯೋಗಾವಕಾಶ ಹೆಚ್ಚಳ - ರೈಲ್ವೆ ಸಚಿವ ಅಶ್ವಿನಿ ವೈಷ್ಣವ್
3. ಛತ್ತೀಸ್‌ಗಢದಲ್ಲಿ ನಡೆದ ಎರಡು ಪ್ರತ್ಯೇಕ ಕಾರ್ಯಾಚರಣೆಯಲ್ಲಿ ೧೪ ಮಾವೋವಾದಿಗಳು ಹತ
4. ರಾಷ್ಟ್ರೀಯ ಶೂಟಿಂಗ್ ಚಾಂಪಿಯನ್‌ಶಿಪ್: ಜೂನಿಯರ್ ವಿಭಾಗದಲ್ಲಿ ಕರ್ನಾಟಕದ ತಿಲೋತ್ತಮ ಸೇನ್‌ಗೆ ಎರಡು ಚಿನ್ನ

<><><><>

ನವದೆಹಲಿಯ ರಾಯ್ ಪಿಥೋರಾ ಸಾಂಸ್ಕೃತಿಕ ಸಂಕೀರ್ಣದಲ್ಲಿಂದು ಭಗವಾನ್ ಬುದ್ಧರ ಪವಿತ್ರ ಪಿಪ್ರಹ್ವಾ ಅವಶೇಷಗಳ ಅಂತಾರಾಷ್ಟ್ರೀಯ ಪ್ರದರ್ಶನವನ್ನು ಪ್ರಧಾನಿ ನರೇಂದ್ರ ಮೋದಿ ಉದ್ಘಾಟಿಸಿದರು. ಇದೇ ವೇಳೆ ಅವರು, ಭಗವಾನ್ ಬುದ್ಧನಿಗೆ ಸಂಬಂಧಿಸಿದ ಪ್ರದರ್ಶನದ ವಿವಿಧ ವಿಭಾಗಗಳಿಗೂ ಭೇಟಿ ನೀಡಿದರು. ಈ ಪ್ರದರ್ಶನವು ನವದೆಹಲಿಯ ರಾಷ್ಟ್ರೀಯ ವಸ್ತುಸಂಗ್ರಹಾಲಯ ಮತ್ತು ಕೋಲ್ಕತ್ತಾದ ಭಾರತೀಯ ವಸ್ತುಸಂಗ್ರಹಾಲಯದ ಸಂಗ್ರಹಗಳಲ್ಲಿ ಸಂರಕ್ಷಿಸಲಾಗಿರುವ ಪಿಪ್ರಹ್ವಾ ಅಧಿಕೃತ ಅವಶೇಷಗಳು ಮತ್ತು ಪುರಾತತ್ತ್ವ ವಸ್ತುಗಳನ್ನು ಒಂದು ಶತಮಾನಕ್ಕೂ ಹೆಚ್ಚು ಕಾಲದ ನಂತರ ಮೊದಲ ಬಾರಿಗೆ, ಒಂದೆಡೆ ಒಟ್ಟುಗೂಡಿಸಿದೆ. ೧೮೯೮ರಲ್ಲಿ ಪತ್ತೆಯಾದ ಪಿಪ್ರಹ್ವಾ ಅವಶೇಷಗಳು ಆರಂಭಿಕ ಬೌದ್ಧಧರ್ಮದ ಪುರಾತತ್ತ್ವ ಅಧ್ಯಯನದಲ್ಲಿ ಕೇಂದ್ರ ಸ್ಥಾನವನ್ನು ಹೊಂದಿವೆ. ಇವು ಭಗವಾನ್ ಬುದ್ಧನಿಗೆ ನೇರವಾಗಿ ಸಂಬಂಧಿಸಿದ ಐತಿಹಾಸಿಕವಾಗಿ ಮಹತ್ವದ ಅವಶೇಷಗಳಲ್ಲಿ ಸೇರಿವೆ. ಪುರಾತತ್ತ್ವ ಶಾಸ್ತ್ರದ ಪುರಾವೆಗಳು ಪಿಪ್ರಹ್ವಾ ಸ್ಥಳವನ್ನು ಪ್ರಾಚೀನ

ಕಪಿಲವಸ್ತುವಿನೊಂದಿಗೆ ಸಂಯೋಜಿಸುತ್ತವೆ. ಇದನ್ನು ಭಗವಾನ್ ಬುದ್ಧನು ವೈರಾಗ್ಯ ತಾಳುವ ಮೊದಲು ತನ್ನ ಆರಂಭಿಕ ಜೀವನವನ್ನು ಕಳೆದ ಸ್ಥಳವೆಂದು ಗುರುತಿಸಲಾಗಿದೆ. ಬೌದ್ಧ ಬೋಧನೆಗಳೊಂದಿಗೆ ಭಾರತೀಯ ನಾಗರಿಕತೆಯ ಸಂಪರ್ಕಗಳನ್ನು ಮತ್ತು ಆಧ್ಯಾತ್ಮಿಕ, ಸಾಂಸ್ಕೃತಿಕ ಪರಂಪರೆಯನ್ನು ಸಂರಕ್ಷಿಸಲು ಸರ್ಕಾರದ ಪ್ರಯತ್ನಗಳನ್ನು ಈ ಪ್ರದರ್ಶನ ಒತ್ತಿಹೇಳುತ್ತದೆ.

<><><>

ಬುಲೆಟ್ ರೈಲು ಯೋಜನೆಯು ಗಮನಾರ್ಹ ಉದ್ಯೋಗಾವಕಾಶಗಳನ್ನು ಸೃಷ್ಟಿಸುತ್ತಿದೆ. ಅಲ್ಲದೆ ಕಾರ್ಯಾಚರಣೆ ಸಮಯದಲ್ಲಿ ಮತ್ತಷ್ಟು ಹೆಚ್ಚುವರಿ ಉದ್ಯೋಗಾವಕಾಶಗಳನ್ನು ಒದಗಿಸುತ್ತದೆ ಎಂದು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಹೇಳಿದ್ದಾರೆ. ನವದೆಹಲಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈ ಯೋಜನೆ ಪೂರ್ಣಗೊಂಡ ನಂತರ ಮುಂಬೈ ಮತ್ತು ಅಹಮದಾಬಾದ್ ನಡುವಿನ ಪ್ರಯಾಣದ ಸಮಯ ಕೇವಲ ಒಂದು ಗಂಟೆ ೫೮ ನಿಮಿಷಗಳಷ್ಟಾಗುತ್ತದೆ. ಈ ಯೋಜನೆಯು ಪ್ರಮುಖ ವಾಣಿಜ್ಯ ಕೇಂದ್ರಗಳ ಆರ್ಥಿಕತೆಯನ್ನು ಸಂಪರ್ಕಿಸುತ್ತದೆ ಮತ್ತು ಸಂಯೋಜಿಸುತ್ತದೆ ಎಂದರು. ಮಹಾರಾಷ್ಟ್ರದ ಪಾಲ್ಘರ್ ಜಿಲ್ಲೆಯಲ್ಲಿ ಅತಿ ಉದ್ದದ ಸುಮಾರು ೧.೫ ಕಿಲೋಮೀಟರ್ ಉದ್ದದ ಸುರಂಗವನ್ನು ಯಶಸ್ವಿಯಾಗಿ ಕೊರೆಯಲಾಗಿದೆ. ವಿರಾರ್ ಮತ್ತು ಬೊಯ್ಸಾರ್ ರೈಲು ನಿಲ್ದಾಣಗಳ ನಡುವೆ ಈ ಸುರಂಗ ಹಾದು ಹೋಗುತ್ತದೆ. ಅತ್ಯಾಧುನಿಕ ವಿಧಾನವನ್ನು ಬಳಸಿಕೊಂಡು ೧೮ ತಿಂಗಳೊಳಗೆ ಉತ್ಖನನವನ್ನು ಪೂರ್ಣಗೊಳಿಸಲಾಯಿತು ಎಂದು ಅವರು ತಿಳಿಸಿದರು. ಈ ಬುಲೆಟ್ ರೈಲು ಯೋಜನೆ ಪೂರ್ಣಗೊಂಡ ನಂತರ ರಸ್ತೆ ಸಾರಿಗೆಗೆ ಹೋಲಿಸಿದರೆ ಇಂಗಾಲದ ಡೈಆಕ್ಸೈಡ್ ಹೊರ ಸೂಸುವಿಕೆ ಪ್ರಮಾಣ ಸುಮಾರು ಶೇಕಡ ೯೫ರಷ್ಟು ತಗ್ಗಲಿದೆ. ಮಹಾರಾಷ್ಟ್ರದ ಏಳು ಪರ್ವತ ಸುರಂಗಗಳಲ್ಲಿ ಕಾಮಗಾರಿ ಪ್ರಗತಿಯಲ್ಲಿದೆ ಏಂದು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಮಾಹಿತಿ ನೀಡಿದರು.

<><><>

ಇಂದು ಸಾವಿತ್ರಿಭಾಯಿ ಪುಲೆ ಅವರ ಜನ್ಮ ಜಯಂತಿ. ಈ ಹಿನ್ನೆಲೆಯಲ್ಲಿ ಅವರಿಗೆ ಪ್ರಧಾನಿ ನರೇಂದ್ರ ಮೋದಿ ಗೌರವ ನಮನ ಸಲ್ಲಿಸಿದ್ದಾರೆ. ಸೇವೆ ಮತ್ತು ಶಿಕ್ಷಣದ ಮೂಲಕ ಸಮಾಜವನ್ನು ಪರಿವರ್ತಿಸಲು ಜೀವನವನ್ನು ಮುಡುಪಾಗಿಟ್ಟ ಸಾವಿತ್ರಿಭಾಯಿ ಪುಲೆ ಅವರನ್ನು ರಾಷ್ಟ್ರ ಸ್ಮರಿಸುತ್ತದೆ. ಸಮಾನತೆ, ನ್ಯಾಯ ಮತ್ತು ಸಹಾನುಭೂತಿಯ ತತ್ವಗಳಿಗೆ ಸಾವಿತ್ರಿಭಾಯಿ ಪುಲೆ ಬದ್ಧರಾಗಿದ್ದರು.

ಸಾಮಾಜಿಕ ಬದಲಾವಣೆಗೆ ಶಿಕ್ಷಣ ಅತ್ಯಂತ ಶಕ್ತಿಶಾಲಿ ಸಾಧನವಾಗಿದೆ ಎಂದು ಅವರು ನಂಬಿದ್ದರು. ಜ್ಞಾನ ಮತ್ತು ಕಲಿಕೆಯ ಮೂಲಕ ಜೀವನವನ್ನು ಪರಿವರ್ತಿಸುವತ್ತ ಅವರು ಗಮನಹರಿಸಿದ್ದರು ಎಂದು ಸಾಮಾಜಿಕ ಜಾಲತಾಣದಲ್ಲಿ ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

<><><><>

ಛತ್ತೀಸ್‌ಗಢದ ಬಸ್ತಾರ್ ವಿಭಾಗದಲ್ಲಿ ಇಂದು ನಡೆದ ಎರಡು ಪ್ರತ್ಯೇಕ ಕಾರ್ಯಾಚರಣೆಗಳಲ್ಲಿ ೧೮ ಮಾವೋವಾದಿಗಳು ಹತರಾಗಿದ್ದಾರೆ. ಸುಕ್ಮಾ ಜಿಲ್ಲೆಯ ಕೊಂಟಾ ಪ್ರದೇಶದಲ್ಲಿ ಮಾವೋವಾದಿಗಳು ಅಡಗಿರುವ ಕುರಿತು ಖಚಿತ ಗುಪ್ತಚರ ಮಾಹಿತಿ ಮೇರೆಗೆ ಜಿಲ್ಲಾ ಮೀಸಲು ಪೊಲೀಸ್ ಪಡೆ ಕಾರ್ಯಾಚರಣೆ ಆರಂಭಿಸಿತು. ಈ ವೇಳೆ ಭದ್ರತಾ ಪಡೆಗಳು ಮತ್ತು ಮಾವೋವಾದಿಗಳ ನಡುವೆ ಗುಂಡಿನ ಚಕಮಕಿ ನಡೆದಿದೆ. ಕಾರ್ಯಾಚರಣೆಯಲ್ಲಿ ೧೨ ಮಾವೋವಾದಿಗಳು ಹತರಾಗಿದ್ದಾರೆ. ಇನ್ನೊಂದೆಡೆ, ಬಿಜಾಪುರ ಜಿಲ್ಲೆಯಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಇಬ್ಬರು ಮಾವೋವಾದಿಗಳನ್ನು ಭದ್ರತಾ ಪಡೆಗಳು ಹೊಡೆದುರುಳಿಸಿವೆ. ಜಿಲ್ಲೆಯ ಬಸಗುಡ ಪ್ರದೇಶದ ಗಗನ್‌ಪಲ್ಲಿ ಗ್ರಾಮದ ಬಳಿಯ ಕಾಡಿನಲ್ಲಿ ಇಂದು ಬೆಳಗ್ಗೆ ಭದ್ರತಾ ಪಡೆಗಳು ಮತ್ತು ಮಾವೋವಾದಿಗಳ ನಡುವೆ ಗುಂಡಿನ ಚಕಮಕಿ ನಡೆದಿದೆ. ಇಲ್ಲಿಯವರೆಗೆ ಇಬ್ಬರು ಮಾವೋವಾದಿಗಳ ಶವಗಳನ್ನು ಸ್ಥಳದಿಂದ ವಶಪಡಿಸಿಕೊಳ್ಳಲಾಗಿದೆ. ಕಾರ್ಯಾಚರಣೆ ಮುಂದುವರಿದಿದೆ ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

<><><><>

೨೦೨೫ನೇ ವರ್ಷ ಭಾರತದ ಅಭಿವೃದ್ಧಿ ಪಯಣದಲ್ಲಿ ನಿರ್ಣಾಯಕ ಅಧ್ಯಾಯವಾಗಿದೆ. ನೀತಿಗಳು ಪ್ರಗತಿಯಾಗಿ ಮತ್ತು ಉದ್ದೇಶ ಪರಿಣಾಮವಾಗಿ ರೂಪಾಂತರಗೊಂಡಿವೆ. ವಿಶೇಷ ಸರಣಿಯಾದ ಸುಧಾರಣೆ ವರ್ಷದಲ್ಲಿ ೨೦೨೫ರಲ್ಲಿ ಹಣಕಾಸು ಕ್ಷೇತ್ರದಲ್ಲಿ ಭಾರತದ ಪ್ರಗತಿ ಕುರಿತು ವಿಶೇಷ ವರದಿ ಇದೀಗ ಮೂಡಿಬರಲಿದೆ.

***** ಧ್ವನಿ ***** ಗಿರೀಶ್

೨೦೨೫ರಲ್ಲಿ ಸಮಾನತೆ, ನಾವೀನ್ಯತೆ, ತಂತ್ರಜ್ಞಾನ ಮತ್ತು ಜಾಗತಿಕ ಪ್ರಭಾವದಲ್ಲಿನ ಪ್ರಗತಿಗೆ ಭಾರತ ಗಮನಾರ್ಹ ಜಾಗತಿಕ ಮನ್ನಣೆ ಪಡೆಯುತ್ತಿದೆ. ವಿಶ್ವದ ಅತ್ಯಂತ ಸಮ ಸಮಾಜಗಳಲ್ಲಿ ಒಂದಾಗಿ ಭಾರತವನ್ನು ವಿಶ್ವಬ್ಯಾಂಕ್ ಶ್ರೇಣೀಕರಿಸಿದೆ. ಭಾರತ ೨೫.೫ರ ಗಿನಿ ಸೂಚ್ಯಂಕದೊಂದಿಗೆ ಚೀನಾ, ಅಮೆರಿಕ ಸೇರಿ ಎಲ್ಲಾ ಜಿ-೭ ಮತ್ತು ಜಿ-೨೦ ರಾಷ್ಟ್ರಗಳಿಗಿಂತ ಮುಂದಿದೆ. ಇದೇ ವೇಳೆ

ಭಾರತದಲ್ಲಿ ಸಾಮಾಜಿಕ ರಕ್ಷಣಾ ವ್ಯಾಪ್ತಿಯು ೨೦೨೪ರಲ್ಲಿ ಶೇಕಡ ೧೯ರಿಂದ ೨೦೨೫ರಲ್ಲಿ ಶೇಕಡ ೬೪.೩ಕ್ಕೆ ಏರಿಕೆಯಾಗಿದೆ ಎಂದು ಅಂತಾರಾಷ್ಟ್ರೀಯ ಕಾರ್ಮಿಕ ಸಂಸ್ಥೆ ವರದಿ ಮಾಡಿದೆ.

ಭಾರತದ ಡಿಜಿಟಲ್ ಸಾರ್ವಜನಿಕ ಮೂಲಸೌಕರ್ಯ ಜಾಗತಿಕ ಪ್ರಶಂಸೆಯನ್ನು ಗಳಿಸಿದೆ. ಅಂತಾರಾಷ್ಟ್ರೀಯ ಹಣಕಾಸು ನಿಧಿಯು ಏಕೀಕೃತ ಪಾವತಿ ಇಂಟರ್‌ಫೇಸ್ - ಯುಪಿಐ ಅನ್ನು ವಿಶ್ವದ ಅತಿದೊಡ್ಡ ನೈಜ ಸಮಯದ ಪಾವತಿ ವ್ಯವಸ್ಥೆ ಎಂದು ಗುರುತಿಸಿದೆ. ಇದು ಜಾಗತಿಕ ವಹಿವಾಟುಗಳ ೪೯ ಪ್ರತಿಶತವನ್ನು ನಿರ್ವಹಿಸುತ್ತದೆ. ವಿಶ್ವ ಬೌದ್ಧಿಕ ಆಸ್ತಿ ಸಂಸ್ಥೆಯು ಬೌದ್ಧಿಕ ಹೂಡಿಕೆಯಲ್ಲಿ ಭಾರತದ ಬಲವಾದ ಬೆಳವಣಿಗೆಯನ್ನು ಗುರುತಿಸಿದೆ. ಇದು ಜ್ಞಾನ ಆಧಾರಿತ ಆರ್ಥಿಕತೆಯತ್ತ ಬದಲಾವಣೆಯನ್ನು ಪ್ರತಿಬಿಂಬಿಸುತ್ತದೆ. ಭಾರತದಲ್ಲಿ ಕಳೆದ ಒಂದು ದಶಕದಲ್ಲಿ ೧೭.೧ ಕೋಟಿಗೂ ಹೆಚ್ಚು ಜನರು ತೀವ್ರ ಬಡತನದಿಂದ ಹೊರಬಂದಿದ್ದಾರೆ. ಯುನೆಸ್ಕೋ ಮಾನ್ಯತೆ ಮತ್ತು ಜಾಗತಿಕ ನಾವೀನ್ಯತೆ ಸೂಚ್ಯಂಕದಲ್ಲಿ ೩೮ನೇ ಸ್ಥಾನಕ್ಕೆ ಏರಿಕೆಯೊಂದಿಗೆ ಭಾರತದ ಸಾಂಸ್ಕೃತಿಕ ಮತ್ತು ನಾವೀನ್ಯತೆ ಸ್ಥಾನಮಾನ ಸುಧಾರಿಸಿದೆ.

<><><>

ಭಾರತೀಯ ಸಮೂಹ ಸಂವಹನ ಸಂಸ್ಥೆ - ಐಐಎಂಸಿ ತನ್ನ ಪಿಎಚ್‌ಡಿ ಕಾರ್ಯಕ್ರಮವನ್ನು ಪ್ರಾರಂಭಿಸಿದ್ದು, ಇದು ಸಂಸ್ಥೆಯ ೬೦ ವರ್ಷಗಳ ಶೈಕ್ಷಣಿಕ ಪ್ರಯಾಣದಲ್ಲಿ ಒಂದು ಐತಿಹಾಸಿಕ ಮೈಲಿಗಲ್ಲಾಗಿದೆ. ಈ ಕಾರ್ಯಕ್ರಮದ ಅಡಿಯಲ್ಲಿ, ೨೦೨೫-೨೬ನೇ ಸಾಲಿನ ಶೈಕ್ಷಣಿಕ ವರ್ಷದ ಪ್ರವೇಶಕ್ಕಾಗಿ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುತ್ತದೆ. ಪೂರ್ಣ ಸಮಯ ಮತ್ತು ಅರೆಕಾಲಿಕ ಅಭ್ಯರ್ಥಿಗಳಿಗೆ ಆನ್‌ಲೈನ್ ಪ್ರವೇಶ ಪ್ರಕ್ರಿಯೆಯು ಈ ತಿಂಗಳ ೩೦ ರವರೆಗೆ ತೆರೆದಿರುತ್ತದೆ.

<><><>

ಕೃತಕ ಬುದ್ಧಿಮತ್ತೆ ಆಪ್ ಗ್ರೋಕ್ ಮೂಲಕ ಸೃಜಿಸಲಾಗುತ್ತಿರುವ ಎಲ್ಲಾ ಬಗೆಯ ಅಶ್ಲೀಲ ಹಾಗೂ ಕಾನೂನುಬಾಹಿರ ವಿಷಯಗಳನ್ನು ೭೨ ಗಂಟೆಯೊಳಗೆ ವೇದಿಕೆಯಿಂದ ತೆಗೆದುಹಾಕುವಂತೆ ಕೇಂದ್ರ ಸರ್ಕಾರ ಸಾಮಾಜಿಕ ಮಾಧ್ಯಮ ಎಕ್ಸ್‌ಗೆ ನೋಟಿಸ್ ನೀಡುವ ಮೂಲಕ ಗಡುವು ವಿಧಿಸಿದೆ. ಅಲ್ಲದೆ, ಈ ಕುರಿತು ಕೈಗೊಂಡ ಕ್ರಮಗಳ ವಿವರವಾದ ವರದಿಯನ್ನು ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯಕ್ಕೆ ಸಲ್ಲಿಸುವಂತೆ ಸೂಚಿಸಿದೆ.

<><><>

ಮೆಕ್ಸಿಕೋದಲ್ಲಿ ಪ್ರಬಲ ಭೂಕಂಪ ಸಂಭವಿಸಿದ್ದು, ಕನಿಷ್ಠ ಇಬ್ಬರು ನಾಗರಿಕರು ಮೃತಪಟ್ಟಿದ್ದು, ೧೨ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ. ದಕ್ಷಿಣ ಮತ್ತು ಕೇಂದ್ರ ಮೆಕ್ಸಿಕೋದಲ್ಲಿ ರಿಕ್ಟರ್ ಮಾಪಕದಲ್ಲಿ ೬.೫ ತೀವ್ರತೆಯ ಭೂಕಂಪ ಸಂಭವಿಸಿದೆ. ಅಕಾಪುಲ್ಕೋ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಹಾಗೂ ಹೆದ್ದಾರಿಯ ಕೆಲವು ಪ್ರದೇಶಗಳಲ್ಲಿ ಭೂಕುಸಿತ ಸಂಭವಿಸಿದೆ. ಮೆಕ್ಸಿಕೋ ನಗರದಲ್ಲಿ ಕೆಲವು ಕಟ್ಟಡಗಳಿಗೆ ಹಾನಿಯಾಗಿದೆ ಎಂದು ಸ್ಥಳೀಯ ಮಾಧ್ಯಮಗಳು ವರದಿ ಮಾಡಿವೆ.

<><><><>

ಭೋಪಾಲ್‌ನಲ್ಲಿ ನಡೆದ ೬೮ನೇ ರಾಷ್ಟ್ರೀಯ ಶೂಟಿಂಗ್ ಚಾಂಪಿಯನ್‌ಶಿಪ್‌ನ ಮಹಿಳಾ ವಿಭಾಗದ ೧೦ ಮೀಟರ್ ಏರ್ ರೈಫಲ್ ಫೈನಲ್‌ನಲ್ಲಿ ಹರಿಯಾಣದ ಅಮೀರಾ ಅರ್ಷದ್ ಚಿನ್ನದ ಪದಕ ವಿಜೇತರಾಗಿದ್ದಾರೆ. ಅವರು, ಫೈನಲ್‌ನಲ್ಲಿ  ರೈಲ್ವೇಸ್‌ನ ರಾಜಶ್ರೀ ಅನಿಲ್ ಕುಮಾರ್ ಸಂಚೇಟಿ ಅವರನ್ನು ಪರಾಭವಗೊಳಿಸಿದರು. ಛತ್ತೀಸ್‌ಗಢದ ಪ್ರಾಂಜು ಶ್ರೀ ಸೋಮಾನಿ ಕಂಚಿನ ಪದಕ ಗೆದ್ದರು. ನವದೆಹಲಿಯ ಡಾ. ಕರ್ಣಿ ಸಿಂಗ್, ಶೂಟಿಂಗ್ ರೇಂಜ್‌ನಲ್ಲಿ ನಡೆದ ಪುರುಷರ ಟ್ರ್ಯಾಪ್ ಸ್ಪರ್ಧೆಯಲ್ಲಿ ಉತ್ತರ ಪ್ರದೇಶದ ಜುಹೇರ್ ಖಾನ್ ಚಿನ್ನದ ಪದಕ ವಿಜೇತರಾದರು. ಉತ್ತರಾಖಂಡದ ಶಪತ್ ಭಾರದ್ವಾಜ್ ಬೆಳ್ಳಿ ಮತ್ತು ಒಲಿಂಪಿಯನ್ ಕೈನಾನ್ ಚೆನೈ, ಕಂಚಿನ ಪದಕ ಗೆದ್ದರು. ಜೂನಿಯರ್ ವಿಭಾಗದಲ್ಲಿ ೧೦ ಮೀಟರ್ ಏರ್ ರೈಫಲ್ ಜೂನಿಯರ್ ಮತ್ತು ಯೂತ್ ಮಹಿಳಾ ಫೈನಲ್‌ನಲ್ಲಿ ಕರ್ನಾಟಕದ ತಿಲೋತ್ತಮ ಸೇನ್ ಎರಡು ಚಿನ್ನದ ಪದಕ ಗೆದ್ದಿದ್ದಾರೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>